ದಿನಾಂಕ 6-10-2018 ರಂದು ಮಧ್ಯಾಹ್ನ 3.00 ಗಂಟೆಗೆ ಕೊಠಡಿ ಸಂ. 252, ಬಹುಮಹಡಿಗಳ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 37ನೇ (ವಿಶೇಷ) ಸಭೆಯ ನಡುವಳಿಗಳು:

ಉಪಸ್ಥಿತರು:

| | | |
|---|---|---|
| 1. | ಡಾ॥ ಎಸ್.ಕೆ. ಮೇಟಿ, ಮಾನ್ಯ ಕುಲಪತಿಗಳು (ಪ್ರಭಾರ), ಕೃವಿವಿ., ರಾಯಚೂರು | ಅಧ್ಯಕ್ಷರು |
| 2. | ಶ್ರೀ ಎಂ. ಮಹೇಶ್ವರ ರಾವ್, ಭಾಆಸೇ., ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, | ಸದಸ್ಯರು |
| 3. | ಶ್ರೀಮತಿ ಪದ್ಮಾವತಿ, ಸರ್ಕಾರದ ಉಪ-ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ,<br>(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) | ಸದಸ್ಯರು |
| 4. | ಡಾ. ಎಂ. ಶೇಖರಗೌಡ, ಹೇರೂರು, ಗಂಗಾವತಿ, ಕೊಪ್ಪಳ ಜಿಲ್ಲೆ | ಸದಸ್ಯರು |
| 5. | ಶ್ರೀಮತಿ ಹೇಮಾವತಿ ಲಂಕೇಶ, ಗಂಗಾವತಿ, ಕೊಪ್ಪಳ ಜಿಲ್ಲೆ | ಸದಸ್ಯರು |
| 6. | ಶ್ರೀ ಅಮರೇಶ ಬಲ್ಲಿದವ, ದೇವದುರ್ಗ, ರಾಯಚೂರು ಜಿಲ್ಲೆ | ಸದಸ್ಯರು |
| 7. | ಶ್ರೀ ಸಿದ್ದಪ್ಪ ಭಂಡಾರಿ, ಕಲಮಲ, ರಾಯಚೂರು ಜಿಲ್ಲೆ | ಸದಸ್ಯರು |
| 8. | ಶ್ರೀ ವೀರನಗೌಡ ಪರಸರೆಡ್ಡಿ, ನಾಲವಾರ, ಚಿತ್ತಾಪುರ, ಕಲಬುರಗಿ ಜಿಲ್ಲೆ | ಸದಸ್ಯರು |
| 9. | ಡಾ॥ ಎಂ.ಆರ್. ದಿನೇಶ್, ನಿರ್ದೇಶಕರು, ಐ.ಐ.ಹೆಚ್.ಆರ್. ಬೆಂಗಳೂರು<br>(ಐಸಿಎಆರ್ ನಿಂದ ನಾಮನಿರ್ದೇಶಿತ) | ಸದಸ್ಯರು |
| 10. | ಶ್ರೀ ಗುತ್ತಿ ಜಂಬುನಾಥ, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ-ಕಾರ್ಯದರ್ಶಿ |

ಆರಂಭದಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಗಳಾಗಿ ನೇಮಕಗೊಂಡು, ದಿನಾಂಕ 1-9-2018 ರಂದು ಪದಗ್ರಹಣ ಮಾಡಿದ ಡಾ॥ ಎಸ್.ಕೆ. ಮೇಟಿಯವರನ್ನು ಉಪಸ್ಥಿತ ಸದಸ್ಯರ ಪರವಾಗಿ ಶ್ರೀ ಮಹೇಶ್ವರ ರಾವ್, ಸರಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರು ಶುಭ ಕೋರಿದರು.

ತದನಂತರ, ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಮಹಾನಿರ್ದೇಶಕರು ಪರಿಷತ್‌ನ ನಾಮಿನಿಯಾಗಿ ನೂತನವಾಗಿ ಆಯ್ಕೆಗೊಂಡ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ನಿರ್ದೇಶಕರಾದ ಡಾ॥ ಎಂ.ಆರ್. ದಿನೇಶ್ ಇವರನ್ನು ಉಪಸ್ಥಿತ ಸದಸ್ಯರ ಪರವಾಗಿ ಶ್ರೀಮತಿ ಹೇಮಾವತಿ ಲಂಕೇಶ್ ಇವರು ಸ್ವಾಗತಿಸುತ್ತಾ, ಸಭೆಯ ಕಾರ್ಯಕಲಾಪಗಳಿಗೆ ಡಾ॥ ದಿನೇಶ್‌ರವರ ಉಪಸ್ಥಿತಿ ಮೌಲ್ಯವರ್ಧಿತವಾಗಲಿ ಎಂದು ಆಶಿಸಿದರು.

ಆನಂತರ, ವ್ಯವಸ್ಥಾಪನಾ ಮಂಡಳಿಯ ಮಾನ್ಯ ಸದಸ್ಯರನ್ನು ಸ್ವಾಗತಿಸಿ, ಕೋರಂ ಇದ್ದ ಪ್ರಯುಕ್ತ, ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸಭೆಯು ಪ್ರಾರಂಭಗೊಂಡು, ಈ ಕೆಳಗಿನಂತೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

ಸರಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರು ವ್ಯವಸ್ಥಾಪನಾ ಮಂಡಳಿಯ ಪ್ರತಿ ಸಭೆಯಲ್ಲಿ, ಮಾನ್ಯ ಸದಸ್ಯರುಗಳಿಗೆ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣೆ ವಿಭಾಗಗಳಿಗೆ ಸಂಬಂಧಪಟ್ಟಂತೆ ಸಾಧಿಸಲಾಗುತ್ತಿರುವ ಪ್ರಗತಿ, ಪ್ರತಿ ಅಧಿಕಾರಿ / ಮಹಾವಿದ್ಯಾಲಯ / ವಿವಿಧ ಕೇಂದ್ರಗಳ ವ್ಯಾಪ್ತಿಯಲ್ಲಿ ಕೈಗೊಂಡ ಪ್ರಮುಖ ಚಟುವಟಿಕೆಗಳ ವಿವರಗಳ ಬಗ್ಗೆ ಮಂಡನೆಯನ್ನು ಸಂಕ್ಷಿಪ್ತ ಪಿ.ಪಿ.ಟಿ. ಮುಖಾಂತರ ಮಾಡಿ, ತದನಂತರ ಕಾರ್ಯಸೂಚಿಯನ್ವಯ ವಿಷಯಗಳನ್ನು ಚರ್ಚಿಸಿದಾಗ, ವ್ಯವಸ್ಥಾಪನಾ ಮಂಡಳಿಯ ಸಭೆಗಳು ಹೆಚ್ಚು ಪರಿಣಾಮಕಾರಿಯಾಗಬಲ್ಲವೆಂದು ಅಭಿಪ್ರಾಯಪಟ್ಟರು.

ಸದಸ್ಯ-ಕಾರ್ಯದರ್ಶಿಯು ಮೇಲಿನ ಅಭಿಪ್ರಾಯಕ್ಕೆ ಪೂರಕವಾಗಿ, ಪ್ರತಿ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಕೇಂದ್ರ / ರಾಜ್ಯ ಸರಕಾರಗಳಿಂದ ಅಥವಾ ಐ.ಸಿ.ಎ.ಆರ್ / ಯು.ಜಿ.ಸಿ., ಮತ್ತಿತರ ಸಂಬಂಧಿಸಿದ ಸಂಸ್ಥೆಗಳಿಂದ ವಿಶ್ವವಿದ್ಯಾಲಯದಲ್ಲಿ ಸ್ವೀಕೃತವಾಗುವ ಪ್ರಮುಖ ಅಧಿಸೂಚನೆ / ಆದೇಶ / ಸುತ್ತೋಲೆ ಇತ್ಯಾದಿಗಳನ್ನು ಮಂಡಿಸುವುದು ಸೂಕ್ತವೆಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ನಾಮನಿರ್ದೇಶಿತ ಸದಸ್ಯರೂ ಮೇಲಿನ ಅಭಿಪ್ರಾಯಗಳಿಗೆ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದಾಗ, ಮಂಡಳಿಯು ಸರ್ವಾನುಮತದಿಂದ ತನ್ನ ತುರ್ತು / ವಿಶೇಷ ಸಭೆಗಳನ್ನು ಹೊರತುಪಡಿಸಿ, ಕಾಲಕಾಲಕ್ಕೆ ಜರುಗುವ ಸಭೆಗಳ ಕಾರ್ಯಸೂಚಿ ಪಟ್ಟಿಯಲ್ಲಿ ಈ ಕೆಳಗಿನ ವಿಷಯಗಳನ್ನು ಕಡ್ಡಾಯವಾಗಿ ಮಂಡಿಸಿ, ತದನಂತರ ಉಳಿದ ವಿಷಯಗಳನ್ನು ಚರ್ಚಿಸಲು ಠರಾಯಿಸಿತು :

1. ವಿಶ್ವವಿದ್ಯಾಲಯದ ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣೆ ವಿಭಾಗಗಳ ಮತ್ತು ಆಡಳಿತಾತ್ಮಕ / ಅಭಿವೃದ್ಧಿ ಸಂಬಂಧಿತ ಪ್ರಮುಖ ಸಾಧನೆಗಳ ಸಂಕ್ಷಿಪ್ತ ವರದಿ.
2. ಕೇಂದ್ರ / ರಾಜ್ಯ ಸರಕಾರಗಳಿಂದ ಅಥವಾ ಐ.ಸಿ.ಎ.ಆರ್ / ಯು.ಜಿ.ಸಿ., ಮತ್ತಿತರ ಸಂಬಂಧಿಸಿದ ಸಂಸ್ಥೆಗಳಿಂದ ವಿಶ್ವವಿದ್ಯಾಲಯದಲ್ಲಿ ಸ್ವೀಕೃತವಾದ ಪ್ರಮುಖ ಅಧಿಸೂಚನೆ / ಆದೇಶ / ಸುತ್ತೋಲೆಗಳ ಮಂಡನೆ.

ತದನಂತರ, ಅಧ್ಯಕ್ಷರ ಅಪ್ಪಣೆಯ ಮೇರೆಗೆ ಈ ಕೆಳಗಿನಂತೆ ಕಾರ್ಯಸೂಚಿ ಪ್ರಕಾರ ವಿಷಯಗಳ ಕುರಿತು ಚರ್ಚಿಸಿ, ಠರಾಯಿಸಲಾಯಿತು :

| | |
|---|---|
| **ಐಟಂ–1** | **ಸಿ.ಎ.ಎಸ್. 2006ರಡಿ ಶಿಕ್ಷಕರ ಪದೋನ್ನತಿಯ ಪ್ರಕರಣಗಳನ್ನು ಪರಿಶೀಲಿಸಲು ರಚಿಸಲಾದ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸುವ ಕುರಿತು.**<br><br>ಸರಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರು ಸಿ.ಎ.ಎಸ್.–2006 ನಿಯಮಾವಳಿಗಳ ಖಂಡ 3.2.4. ರಲ್ಲಿಯ ಉಪಬಂಧಗಳನ್ನು ಉಲ್ಲೇಖಿಸುತ್ತಾ, ಸಿ.ಎ.ಎಸ್. 2006ರಡಿ ಪದೋನ್ನತಿ ಬಯಸುವ ಶಿಕ್ಷಕರು ಸಿ.ಎ.ಎಸ್. ನಿಯಮಾವಳಿಗಳನ್ವಯ ನಿಗದಿಪಡಿಸಲಾದ ಎಲ್ಲಾ ಅರ್ಹತೆಗಳನ್ನು ಪೂರೈಸಿರುವುದಾಗಿ ಲಿಖಿತವಾಗಿ ವಿಶ್ವವಿದ್ಯಾಲಯಕ್ಕೆ ತಮ್ಮ ಸ್ಕೋರ್‌ಕಾರ್ಡ್ ಆಧಾರಿತ ಕಾರ್ಯನಿರ್ವಹಣಾ ವರದಿಯನ್ನು ಸಂಬಂಧಿತ ದಾಖಲಾತಿಗಳೊಂದಿಗೆ ಅರ್ಹತೆಯ ದಿನಾಂಕದಂದು ಅಥವಾ ಅದರ ನಂತರ ಸಲ್ಲಿಸಬಹುದಾಗಿದ್ದು, ತದನಂತರ, ವಿಶ್ವವಿದ್ಯಾಲಯವು ಇಂತಹ ಅರ್ಜಿಗಳು ಸಲ್ಲಿತಗೊಂಡ ದಿನಾಂಕದಿಂದ 6 ತಿಂಗಳೊಳಗಾಗಿ ಪರಿಶೀಲನೆ / ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಿ, ವಿಳಂಬವಾಗದಂತೆ ಕ್ರಮವಿಡಬೇಕೆಂದೂ ಮತ್ತು ಯಾವುದೇ ಕಾರಣದಿಂದಾಗಲಿ, ಶಿಕ್ಷಕನು ತಾನು ಪದೋನ್ನತಿಗಾಗಿ ಅರ್ಹಗೊಂಡ ದಿನಾಂಕದ ನಂತರ ತನ್ನ ಬಯೋ–ಡಾಟಾವನ್ನು ಸಲ್ಲಿಸಿದಲ್ಲಿ, ಆ ಶಿಕ್ಷಕನ ಪದೋನ್ನತಿಯ ಅರ್ಹ ದಿನಾಂಕವು ಆತನು ತನ್ನ ಬಯೋ–ಡಾಟಾವನ್ನು ಸಲ್ಲಿಸಿದ ದಿನಾಂಕವಾಗುತ್ತದೆಂದು ಸ್ಪಷ್ಟಪಡಿಸಿರುವ ಹಿನ್ನೆಲೆಯಲ್ಲಿ ಈ ಕುರಿತು ಡಾ॥ ಹೆಚ್.ವಿ. ನಂಜಪ್ಪ ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ಶಿಫಾರಸ್ಸುಗಳನ್ನು ಅಂಗೀಕರಿಸುವುದು ಕಾನೂನುಸಮ್ಮತವಾಗುವುದಿಲ್ಲವೆಂದು ಅಭಿಪ್ರಾಯಿಸಿದರು.<br><br>ಮಾನ್ಯ ನಾಮನಿರ್ದೇಶಿತ ಸದಸ್ಯರಾದ ಡಾ॥ ಎಂ. ಶೇಖರಗೌಡ ಇವರು ಈ ಹಿಂದೆ ಸದರಿ ಖಂಡದಲ್ಲಿಯ ಉಪಬಂಧಗಳನ್ವಯ ಪದೋನ್ನತಿಯನ್ನು ನೀಡದೇ, ಪದೋನ್ನತಿಗಾಗಿ ಅರ್ಹವಾದ ದಿನಾಂಕದಂದೇ ಪದೋನ್ನತಿಗೊಳಿಸಿರುವ ಹಿನ್ನೆಲೆಯಲ್ಲಿ, ವಿಶೇಷ ಪ್ರಕರಣವೆಂದು ಪರಿಗಣಿಸಿ, ಕೇವಲ ಒಂದು ಬಾರಿ ಮಾತ್ರ ಪದೋನ್ನತಿ ನೀಡುವ ನಿಟ್ಟಿನಲ್ಲಿ, ಸಮಿತಿಯ ಶಿಫಾರಸ್ಸುಗಳನ್ನು ಅಂಗೀಕರಿಸಲು ಸಲಹೆ ಇತ್ತರು.<br><br>**ಠರಾವು :**<br><br>ಸರಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಸಿ.ಎ.ಎಸ್. –2006 ರ ನಿಯಮಾವಳಿಗಳ ಖಂಡ 3.2.4 ಉಪಬಂಧಗಳಾಧಾರಿತ ಅಭಿಪ್ರಾಯದ ಹಿನ್ನೆಲೆಯಲ್ಲಿ, ಮಂಡಳಿಯು ಸಿ.ಎ.ಎಸ್. 2006ರಡಿ ಶಿಕ್ಷಕರ ಪದೋನ್ನತಿಯ ಪ್ರಕರಣಗಳನ್ನು ಪರಿಶೀಲಿಸಲು ಡಾ॥ ಹೆಚ್.ವಿ. ನಂಜಪ್ಪ ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ಶಿಫಾರಸ್ಸುಗಳನ್ನು ಅಂಗೀಕರಿಸದೇ, ಪದೋನ್ನತಿ ನೀಡಲಾದ ಹಾಗೂ ನೀಡಲು ಪ್ರಸ್ತಾಪಿಸಿರುವ ಶಿಕ್ಷಕರ ಎಲ್ಲಾ ಪ್ರಕರಣಗಳನ್ನು ಸಿ.ಎ.ಎಸ್.–2006 ನಿಯಮಾವಳಿಗಳ ಖಂಡ 3.2.4. ರಲ್ಲಿಯ ಉಪಬಂಧಗಳನ್ವಯ ಪರಿಶೀಲಿಸಿ, ಯುಕ್ತ ಕ್ರಮವಿಡಲು ತೀರ್ಮಾನಿಸಿತು.<br><br>**(ಕ್ರಮ : ಕುಲಸಚಿವರು)** |

**ಐಟಂ–2** **ಸಾಮಾನ್ಯ (ಗ್ರಾಮೀಣ) ಪ್ರವರ್ಗದಡಿ ಸಹಾಯಕ ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ) ಹುದ್ದೆಯ ನೇಮಕಾತಿ ಸಂಬಂಧ ಆಯ್ಕೆ ಸಮಿತಿಯು ಮಾಡಿದ ಶಿಫಾರಸ್ಸನ್ನು ಪರಿಗಣಿಸುವ ಕುರಿತು.**

ವಿಷಯಕ್ಕೆ ಸಂಬಂಧಿಸಿದಂತೆ, ಸಭೆಯಲ್ಲಿ ಉಪಸ್ಥಿತರಿದ್ದ ಹಿಂದಿನ ಕುಲಪತಿಗಳು ಹಾಗೂ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ಆಯ್ಕೆ ಸಮಿತಿಯ ಅಧ್ಯಕ್ಷರೂ ಆದ ಡಾ|| ಪಿ.ಎಂ. ಸಾಲಿಮಠ ರವರು ಈ ಕೆಳಗಿನಂತೆ ತಮ್ಮ ಲಿಖಿತ ಸ್ಪಷ್ಟೀಕರಣವನ್ನು ನೀಡಿದರು :

- ಶ್ರೀಮತಿ ಜಮುನಾ, ಬಿ., ಅವರು 1 ರಿಂದ 7ನೇ ತರಗತಿಯವರೆಗಿನ ಗ್ರಾಮೀಣ ಅಭ್ಯರ್ಥಿ ಪ್ರಮಾಣಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿರುವುದಿಲ್ಲ. ಕೇವಲ 8 ರಿಂದ 10ನೇ ತರಗತಿಯವರೆಗಿನ ಗ್ರಾಮೀಣ ಅಭ್ಯರ್ಥಿ ಪ್ರಮಾಣಪತ್ರವನ್ನು ಅರ್ಜಿಯ ಜೊತೆಗೆ ಸಲ್ಲಿಸಿದ್ದರಿಂದ ಅರ್ಜಿ ಪರಿಶೀಲನಾ ಸಮಿತಿಯು ಸದರಿಯವರನ್ನು ಗ್ರಾಮೀಣ ಕೋಟಾದಡಿಯಲ್ಲಿ ಅರ್ಹರನ್ನಾಗಿಸಿದ್ದಿಲ್ಲ.
- ಶ್ರೀಮತಿ ಜಮುನಾ, ಬಿ., ಅವರು ಪರಿಶಿಷ್ಟ ಪಂಗಡ ಅಭ್ಯರ್ಥಿಯಾಗಿದ್ದು, ಸಹಾಯಕ ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ) ಹುದ್ದೆಗೆ ಪರಿಶಿಷ್ಟ ಪಂಗಡ ಮೀಸಲಾತಿಯಡಿ ಅರ್ಹರನ್ನಾಗಿ ಮಾಡಿ ಸಂದರ್ಶನಕ್ಕೆ ಆಹ್ವಾನಿಸಲಾಗಿತ್ತು.
- ಸಹಾಯಕ ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ) ಹುದ್ದೆಯ ಸಂದರ್ಶನ ಸಮಯದಲ್ಲಿ ಶ್ರೀಮತಿ ಜಮುನಾ, ಬಿ., ಅವರಿಂದ 1 ರಿಂದ 7ನೇ ತರಗತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅಭ್ಯಸಿಸಿರುವ ಬಗ್ಗೆ ಮೂಲ ಪ್ರಮಾಣಪತ್ರವನ್ನು ಪರಿಶೀಲಿಸಿ, ಸಾಮಾನ್ಯ (ಗ್ರಾಮೀಣ) ಮೀಸಲಾತಿಯಡಿ ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಎಲ್ಲ ಸದಸ್ಯರು ಸರ್ವಾನುಮತದಿಂದ ಸದರಿಯವರನ್ನು ಅರ್ಹರನ್ನಾಗಿ ಮಾಡಲಾಗಿತ್ತು.

ಮಾನ್ಯ ಸದಸ್ಯರಾದ ಶ್ರೀ ಅಮರೇಶ್ ಬಲ್ಲಿದವ ಇವರು ಶ್ರೀಮತಿ ಜಮುನಾ ತಮ್ಮ ಮೂಲ ಅರ್ಜಿಯೊಂದಿಗೆ ಪರಿಶಿಷ್ಟ ಪಂಗಡ ಹಾಗೂ ಗ್ರಾಮೀಣ ಅಭ್ಯರ್ಥಿ ವ್ಯಾಸಂಗದ ಪ್ರಮಾಣಪತ್ರಗಳನ್ನು ಸಲ್ಲಿಸಿದ್ದು, ತದನಂತರ ಆಯ್ಕೆ ಸಮಿತಿಯ ಮುಂದೆ ಸಂದರ್ಶನಕ್ಕಾಗಿ ಹಾಜರಾದಾಗ ಗ್ರಾಮೀಣ ಅಭ್ಯರ್ಥಿಯ ಸಂಪೂರ್ಣ ಪ್ರಮಾಣಪತ್ರಗಳನ್ನು ಹಾಜರುಪಡಿಸಿದ್ದರಿಂದ, ಆಯ್ಕೆ ಸಮಿತಿಯು ಶ್ರೀಮತಿ ಜಮುನಾರವನ್ನು ಸಾಮಾನ್ಯ (ಗ್ರಾಮೀಣ) ಅಭ್ಯರ್ಥಿ ಪ್ರವರ್ಗದಡಿ ಅರ್ಹಗೊಳಿಸಿ, ಮೂರನೇ ಕ್ರಮಾಂಕದಲ್ಲಿರಿಸಿ, ನೇಮಕಾತಿಗಾಗಿ ಶಿಫಾರಸ್ಸು ಮಾಡಲಾಗಿರುವುದರಿಂದ ಮತ್ತು ಒಂದನೇ ಮತ್ತು ಎರಡನೇ ಕ್ರಮಾಂಕಗಳಲ್ಲಿರುವ ಅಭ್ಯರ್ಥಿಗಳ ಅನರ್ಹತೆಯ ಕಾರಣ, ಮೂರನೇ ಕ್ರಮಾಂಕದಲ್ಲಿರಿಸಿ, ನೇಮಕಾತಿಗಾಗಿ ಶಿಫಾರಸ್ಸಿಸಲಾದ ಶ್ರೀಮತಿ ಜಮುನಾರವರಿಗೆ ಸಹಾಯಕ ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ) ಹುದ್ದೆಯ ನೇಮಕಾತಿ ಆದೇಶವನ್ನು ನೀಡಬೇಕಾಗಿ ಆಗ್ರಹಿಸಿದರು.

**ಠರಾವು :**

ಡಾ|| ಪಿ.ಎಂ. ಸಾಲಿಮಠರವರ ಮೇಲಿನ ಸ್ಪಷ್ಟೀಕರಣದ ಹಿನ್ನೆಲೆಯಲ್ಲಿ, ಶ್ರೀಮತಿ ಜಮುನಾರವರು ಸಹಾಯಕ ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ) ಹುದ್ದೆಗೆ 8-2-2016 ರಂದು ಸಲ್ಲಿಸಿದ ಮೂಲ ಅರ್ಜಿಯನ್ನು ಪರಿಶೀಲಿಸಲಾಗಿ, ಪರಿಶೀಲನಾ ಸಮಿತಿಯು ಅವರನ್ನು ಪರಿಶಿಷ್ಟ ಪಂಗಡದ ಪ್ರವರ್ಗದಲ್ಲಿರಿಸಿ, ಗ್ರಾಮೀಣ ಅಭ್ಯರ್ಥಿ ಪ್ರವರ್ಗದ ದಾಖಲಾತಿಗಳು ಅಪೂರ್ಣವೆಂದು ಷರಾ ಬರೆದಿರುವುದನ್ನು ಮಂಡಳಿಯ ಸದಸ್ಯರು ಗಮನಿಸಿದರು.

ಮಂಡಳಿಯು ಮೂಲ ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ, ಹೆಚ್ಚುವರಿ ದಾಖಲಾತಿಗಳನ್ನು ಸಲ್ಲಿಸಲು ನಿಗದಿಗೊಳಿಸಿದ ಕೊನೆಯ ದಿನಾಂಕ ಮತ್ತು ಶ್ರೀಮತಿ ಜಮುನಾ ಇವರು ಗ್ರಾಮೀಣ ಅಭ್ಯರ್ಥಿ ಪ್ರವರ್ಗದ ಕುರಿತು ಸಂಪೂರ್ಣ ಪ್ರಮಾಣಪತ್ರಗಳನ್ನು ಸಲ್ಲಿಸಿದ ದಿನಾಂಕದ ವಿವರಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಿ, ವಿಷಯವನ್ನು ಮುಂದೂಡಲು ಠರಾಯಿಸಿತು.

(ಕ್ರಮ : ಕುಲಸಚಿವರು)

**ಐಟಂ–3** ವಿತ್ತೀಯ ಅಧಿಕಾರಗಳ ಪ್ರತ್ಯಾಯೋಜನೆಯ ಯಾದಿಯಲ್ಲಿ ಗ್ರಂಥಾಲಯದ ಅಂಶವನ್ನು ಸೇರಿಸಿ, ಸದರಿ ಅಂಶದ ವಿತ್ತೀಯ ಅಧಿಕಾರವನ್ನು ವಿಶ್ವವಿದ್ಯಾಲಯದ ಗ್ರಂಥಾಲಯಾಧಿಕಾರಿಯವರಿಗೆ ಪ್ರತ್ಯಾಯೋಜಿಸುವ ಕುರಿತು.

ಠರಾವು :

ಸರಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರು ವಿಷಯದ ಕುರಿತು ಸವಿವರ ಹಾಗೂ ಸುದೀರ್ಘ ಚರ್ಚೆಯನ್ನು ಬಯಸಿದ ಕಾರಣ, ಮಂಡಳಿಯು ಸರ್ವಾನುಮತದಿಂದ ವಿಷಯವನ್ನು ಮುಂದಿನ ಸಭೆಯಲ್ಲಿ ಚರ್ಚಿಸಿ, ನಿರ್ಧರಿಸುವ ಸಲುವಾಗಿ ಮುಂದೂಡಲು ಠರಾಯಿಸಿತು.

(ಕ್ರಮ : ಕುಲಸಚಿವರು)

**ಐಟಂ–4** **ವಿವಿಧ ನ್ಯಾಯಾಲಯಗಳಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಪರವಾಗಿ ವಕಾಲತ್ತು ವಹಿಸುವ ವಕೀಲರುಗಳಿಗೆ ನೀಡಲಾಗುವ ಫೀಸ್ ಪರಿಷ್ಕರಣೆಯನ್ನು ಪರಿಗಣಿಸುವ ಕುರಿತು**

**ಠರಾವು :**

ಸಭೆಯು ಸರ್ವಾನುಮತದಿಂದ ಈ ಕೆಳಗಿನಂತೆ ವಿಶ್ವವಿದ್ಯಾಲಯದ ಪರವಾಗಿ ವಕಾಲತ್ತು ವಹಿಸುವ ವಕೀಲರುಗಳಿಗೆ ಫೀಸ್ ನೀಡಲು ಒಪ್ಪಿ, ಮುಂದಿನ ಸಭೆಯಲ್ಲಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಸ್ಥಿತಿಗತಿ ಮತ್ತು ಆಯಾ ಪ್ರಕರಣಗಳ ವಕೀಲರು ಕೈಗೊಂಡ ಕ್ರಮದ ಬಗ್ಗೆ ವಿವರಗಳನ್ನು ಮಂಡಿಸುವಂತೆ ಠರಾಯಿಸಿತು :

| | Types of Cases | | Approved |
|---|---|---|---|
| 1. | **Cases filed by UAS, Raichur** | | |
| | a) Writ Petition | Rs.35,000/- | a) Rs.35,000/-, Rs.45,000/- inclusive of Drafting / Conducting Case and Other Expenses |
| | b) Writ Appeal<br>c) MFA<br>d) RSA | Rs.45,000/- | b) Rs.1,000/- for hearing and Rs.2,000/- for final hearing but limited to Rs.10,000/-. |
| | e) For any other case | | Rs.35,000/- or Rs.45,000/- |
| | **Note:-** In matters where Senior Advocate is engaged, suitable fees be paid to him as decided by the Vice-Chancellor, treating the cases as Special Cases. | | |
| 2. | **Cases filed against UAS, Raichur.** | | |
| | a) Writ Petition | Rs.35,000/- | a) Rs.35,000/-, Rs.45,000/- inclusive of Drafting / Conducting Case and Other Expenses |
| | b) Writ Appeal<br>c) MFA<br>d) RSA | Rs.45,000/- | b) Rs.1,000/- for hearing and Rs.2,000/- for final hearing but limited to Rs.10,000/-. |
| 3. | **Cases of Common Petition or Appeal/ Connected Petition or Appeal / Clubbed Cases/ Additional cases / Petitions / Appeals.** | Rs.2,000/- per each case | Rs.2,000/- for each Petition or for filing Statement of Objections filed in each Petition / Additional Case /, Connected Case<br><br>Rs.1,000/- for drafting in each Petition, etc., |
| 4. | **Cases filed in Trial Courts** | | |
| | O.S. / C.C./ any other case filed on behalf of or against UAS Raichur. | | Rs. 20,000/-+ Rs.3,000/- (Other Expenses.) |
| | For each hearing / Interim Application Rs.2,000/- (limited to Rs.8,000/- irrespective of number of hearings.) | | |
| 5. | **Legal Opinion** | | Rs.3,000/- for each opinion |
| 6. | **Due Diligences / Title Scrutiny** | | Rs.3,000/- |
| 7. | **Caveat against a Single party** | | Rs.5,000/- for Main Petition + Rs.500/- Other Expenses. |
| | **Each Additional Caveat** | | Rs.1,000/- + Rs.500/- Other Expenses |
| 8. | **Review Petition** | | Fees as approved in case of Petitions filed before High Court / Trial Courts. |

| | | |
|---|---|---|
| 9. | **W.Ps before Supreme Court filed by UAS, Raichur or against UAS, Raichur.** | Rs.50,000/- + Other Expenses (excluding Court Fee if any). |
| 10. | **Petitions in any other Courts / Tribunals/ Forums / Commissions, irrespective of nature of case.** | Rs.20,000/- + Other Expenses (excluding Court Fee if any). |

**WP – Writ Petition, WA – Writ Appeal, MFA – Miscellaneous First Appeal, RSA – Revision Second Appeal, OS – Original Suit, CC – Criminal Case.**

**(ಕ್ರಮ : ಕುಲಸಚಿವರು)**

**ಹೆಚ್ಚುವರಿ ಕಾರ್ಯಸೂಚಿ ವಿಷಯಗಳು**

**ಐಟಂ–1** **ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕ ವೃಂದದ ಹುದ್ದೆಗಳ ನೇಮಕಾತಿಗಾಗಿ ಗರಿಷ್ಠ ವಯೋಮಿತಿಯನ್ನು ಅಳವಡಿಸಿಕೊಳ್ಳಲು ಅನುಮೋದನೆ ನೀಡುವ ಕುರಿತು.**

**ಠರಾವು :**

ಸಭೆಯು ಸರ್ವಾನುಮತದಿಂದ ಈ ಕೆಳಗಿನಂತೆ ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕ ವೃಂದದ ಹುದ್ದೆಗಳ ನೇಮಕಾತಿಗಾಗಿ ಗರಿಷ್ಠ ವಯೋಮಿತಿಯನ್ನು ಅಳವಡಿಸಿಕೊಳ್ಳಲು ಠರಾಯಿಸಿತು :

| ವೃಂದ | ನಿಗದಿಪಡಿಸಿದ ಗರಿಷ್ಠ ವಯೋಮಿತಿ | ಆಧಾರ |
|---|---|---|
| ಸಹಾಯಕ ಪ್ರಾಧ್ಯಾಪಕ ವೃಂದ | 35 ವರ್ಷ – ಸಾಮಾನ್ಯ ಅಭ್ಯರ್ಥಿಗಳಿಗೆ<br>38 ವರ್ಷ – ಹಿಂದುಳಿದ ಅಭ್ಯರ್ಥಿಗಳಿಗೆ<br>40 ವರ್ಷ – ಎಸ್.ಸಿ./ಎಸ್.ಟಿ./ ಪ್ರವರ್ಗ–1 ಅಭ್ಯರ್ಥಿಗಳಿಗೆ | ಕರ್ನಾಟಕ ಸರ್ಕಾರದ ಡಿ.ಪಿ.ಎ.ಆರ್. ನ ನಿಯಮ / ವಿನಿಯಮಗಳು ಹಾಗೂ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು ಇವರ ಪತ್ರ ಸಂ. ಕೃಇ 21 ಕೃವಿವಿ 2016 ದಿನಾಂಕ: 06–01–2017. |

**(ಕ್ರಮ : ಕುಲಸಚಿವರು)**

**ಐಟಂ–2** **ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕ ವೃಂದದ ಹುದ್ದೆಗಳ ನೇಮಕಾತಿಯ ಪದ್ಧತಿಯಲ್ಲಿಯ ಬದಲಾವಣೆಯನ್ನು ಅನುಮೋದಿಸುವ ಕುರಿತು.**

**ಠರಾವು :**

ಸಭೆಯು ಸರ್ವಾನುಮತದಿಂದ ಈ ಕೆಳಗಿನಂತೆ ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕ ವೃಂದದ ಹುದ್ದೆಗಳ ನೇಮಕಾತಿಯ ಪದ್ಧತಿಯಲ್ಲಿಯ ಬದಲಾವಣೆಯನ್ನು ಅಳವಡಿಸಿಕೊಳ್ಳಲು ಠರಾಯಿಸಿತು :

| ವೃಂದ | ಅಳವಡಿಕೊಳ್ಳಬೇಕಾದ ನೇಮಕಾತಿ ಪದ್ಧತಿ | ಕಾರಣ |
|---|---|---|
| ಸಹಾಯಕ ಪ್ರಾಧ್ಯಾಪಕ ವೃಂದ | *50% weightage for qualifying examination marks like B.Sc., M.Sc. and Ph.D. in the relevant subject (no other criteria, as it is entry level cadre) and<br>*50% weightage for the marks scored in the written examination conducted by an identified national agency or any other competent agency.<br>*No interview | *ಸಂದರ್ಶನ ಸಮಿತಿಯ ಪಕ್ಷಪಾತದ ನಿವಾರಣೆ<br>*ಅಭ್ಯರ್ಥಿಯ ಸಾಮರ್ಥ್ಯದ ನಿಷ್ಪಕ್ಷಪಾತವಾದ ನಿರ್ಧಾರಣೆ |

**(ಕ್ರಮ : ಕುಲಸಚಿವರು)**

| ಐಟಂ–3 | ಕೃವಿವಿ., ಸಿಬ್ಬಂದಿಯವರ ರೂ. 25,000/– ಕ್ಕಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗೆ ಅನುಮೋದನೆ ನೀಡುವ ಕುರಿತು. |
|---|---|

ಠರಾವು :

ಮಾನ್ಯತೆ ಹೊಂದಿದ ಆಸ್ಪತ್ರೆಗಳಲ್ಲಿ ಈ ಕೆಳಕಂಡ ಸಿಬ್ಬಂದಿಯವರು ಪಡೆದ ಚಿಕಿತ್ಸೆಯ ರೂ. 25,000/–ಕ್ಕಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿ, ಠರಾಯಿಸಿತು :

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಮರು – ಪಾವತಿಸಬೇಕಾದ ಮೊತ್ತ (ರೂ.) |
|---|---|---|
| 1 | ಶ್ರೀ. ವಿರುಪಾಕ್ಷಪ್ಪ ಸಿ. ಎಮ್.<br>ಸಹಾಯಕರು<br>ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳ. | 29,859/– |
| 2 | ಶ್ರೀಮತಿ. ಅಂಜಲಾದೇವಿ<br>ಬೆರಳಚ್ಚುಗಾರರು /ಗಣಕಯಂತ್ರ ನಿರ್ವಾಹಕರು<br>ಕೃಷಿ ಸಂಶೋಧನಾ ಕೇಂದ್ರ, ಸಿರುಗುಪ್ಪ. | 63,824/- |
| 3 | ಶ್ರೀ. ರವಿಕುಮಾರ<br>ಪ್ರಯೋಗಶಾಲಾ ಸಹಾಯಕರು<br>ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು. | 1,96,599/- |
| 4 | ಶ್ರೀ. ವಿಜಯಶಂಕರ್, ಪಿ<br>ಕೃಷಿ ಕಾರ್ಮಿಕರು<br>ಕೃಷಿ ಸಂಶೋಧನಾ ಕೇಂದ್ರ ಹಗರಿ | 28,460/- |
| 5 | ಶ್ರೀ. ಮಲ್ಲಿಕಾರ್ಜುನ,<br>ಕ್ಷೇತ್ರ ಸಹಾಯಕರು,<br>ಕೃಷಿ ಸಂಶೋಧನಾ ಕೇಂದ್ರ, ಮಾಳನೂರು. | 30,921/- |
| 6 | ಶ್ರೀ. ಗಿರೀಶ,<br>ಹಿರಿಯ ಸಹಾಯಕ ,<br>ಶಿಕ್ಷಣ ನಿರ್ದೇಶಕರ ಕಾರ್ಯಾಲಯ<br>ಕೃಷಿ ವಿಶ್ವವಿದ್ಯಾಲಯ ರಾಯಚೂರು. | 39,164/- |

ಮುಂದುವರೆದು, ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ಈ ಕೆಳಕಂಡ ಸಿಬ್ಬಂದಿಯವರು ಪಡೆದ ತುರ್ತು ಚಿಕಿತ್ಸೆಯ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿ, ಡಿ.ಹೆಚ್.ಓ.ರವರ ಮೇಲುರುಜುಗಾಗಿ ಕಳುಹಿಸಲು ಮತ್ತು ಮೇಲುರುಜುಗೊಂಡ ಮೊತ್ತದ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಠರಾಯಿಸಿತು :

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚದ ಮೊತ್ತ (ರೂ.) |
|---|---|---|
| 01 | ಶ್ರೀ. ದಿ. ವೆಂಕಟೇಶ ಮಹಾದೇವಪ್ಪ<br>ಕೃಷಿ ಕಾರ್ಮಿಕರು, ಮು.ಕೃಸಂ. ಕೇಂದ್ರ, ರಾಯಚೂರು. | 3,66,297/– |
| 02 | ಡಾ. ಮುಖೇಶ ಕುಮಾರ ಮೀನಾ<br>ಸಹಾಯಕ ಪ್ರಾಧ್ಯಾಪಕರು<br>ಸಂಶೋಧನಾ ನಿರ್ದೇಶನಾಲಯ, ಕೃವಿವಿ., ರಾಯಚೂರು. | 10,049/– |
| 03 | ಡಾ. ಪ್ರಸಾದ್ ಎಸ್. ಕುಲಕರ್ಣಿ<br>ಸಹಾಯಕ ಪ್ರಾಧ್ಯಾಪಕರು, ಕೃತಾ.ಮ., ರಾಯಚೂರು. | 74,000/– |

| | | |
|---|---|---|
| 04 | ಡಾ॥ ಜಿ. ಗಿರೀಶ<br>ಸಹಾಯಕ ಪ್ರಾಧ್ಯಾಪಕರು, ಕೃಸಂ.ಕೇಂದ್ರ, ಹಗರಿ. | 37,450/– |
| 05 | ಡಾ॥ ಸಂಗೀತಾ ಐ. ಮಾಚಾ,<br>ಸಹಾಯಕ ಪ್ರಾಧ್ಯಾಪಕರು, ಕೃಮ., ರಾಯಚೂರು. | 36,699/– |
| 06 | ಶ್ರೀಮತಿ. ಶಾಲಂಬಿ ಖಾಸಿಂ<br>ಕೃಷಿ ಕಾರ್ಮಿಕಳು, ಮು.ಕೃಸಂ. ಕೇಂದ್ರ, ರಾಯಚೂರು. | 18,800/– |
| 07 | ಶ್ರೀಮತಿ. ಶ್ರೀದೇವಿ ಗಂಡ ಶರಣಪ್ಪ,<br>ಕೃಷಿ ಕಾರ್ಮಿಕಳು, ಕೃಸಂ.ಕೇಂದ್ರ, ಗಂಗಾವತಿ. | 21,010/– |
| 08 | ಶ್ರೀ. ಸಿ.ಯು. ಕೊಟಬಾಗಿ,<br>ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳು,<br>ಕುಲಸಚಿವರ ಕಛೇರಿ, ಕೃವಿವಿ., ರಾಯಚೂರು. | 6,36,869/– |

**(ಕ್ರಮ: ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು))**

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

1. **ಮಾನ್ಯ ವ್ಯವಸ್ಥಾಪನಾ ಮಂಡಳಿಯ ನಾಮನಿರ್ದೇಶಿತ ಸದಸ್ಯರುಗಳ ಉತ್ತರ ಭಾರತದ ಕೃಷಿ ಅಧ್ಯಯನ ಪ್ರವಾಸ ಕೈಗೊಳ್ಳುವ ಕುರಿತು.**

ಸದಸ್ಯ–ಕಾರ್ಯದರ್ಶಿಯು ವಿಷಯದ ಕುರಿತಂತೆ ದಿನಾಂಕ 31–8–2018 ರ ಸರಕಾರದ ಕಾರ್ಯದರ್ಶಿಗಳು (ಕೃಷಿ ಇಲಾಖೆ) ಇವರಿಂದ ಬಂದ ಪತ್ರದಲ್ಲಿ ಸದರಿ ಅಧ್ಯಯನ ಪ್ರವಾಸಕ್ಕೆ ಅಂದಾಜಿಸಲಾದ ರೂ. 11.98 ಲಕ್ಷ (ಪ್ರತಿ ನಾಮನಿರ್ದೇಶಿತ ಸದಸ್ಯರುಗಳಿಗೆ ತಲಾ ಸುಮಾರು ರೂ. 2.00 ಲಕ್ಷ) ವೆಚ್ಚದ ಕುರಿತು ಸೂಕ್ತ ಸಮರ್ಥನೆಯೊಂದಿಗೆ ಪ್ರಸ್ತಾವನೆಯನ್ನು ಮರುಸಲ್ಲಿಸುವಂತೆ ನಿರ್ದೇಶಿಸಿದ್ದನ್ನು ಸಭೆಯ ಗಮನಕ್ಕೆ ತಂದರು.

**ಠರಾವು :**

ಮಾನ್ಯ ನಾಮನಿರ್ದೇಶಿತ ಸದಸ್ಯರು ಉತ್ತರ ಭಾರತದ ತಮ್ಮ ಕೃಷಿ ಅಧ್ಯಯನ ಪ್ರವಾಸದಲ್ಲಿ ಭೇಟಿ ನೀಡಲಿರುವ ಕೃಷಿ ವಿಶ್ವವಿದ್ಯಾಲಯಗಳು, ಕೃಷಿ ಮತ್ತು ಕೃಷಿ ಸಂಬಂಧಿತ ವಿವಿಧ ಕೇಂದ್ರಗಳ ಬಗ್ಗೆ, ಅಲ್ಲಿಯ ಆವಿಷ್ಕಾರಗಳ ಬಗ್ಗೆ ವಿಸ್ತರಣಾ ನಿರ್ದೇಶಕರು ಹಾಗೂ ಸಂಶೋಧನಾ ನಿರ್ದೇಶಕರು ಸಮಗ್ರ ವಿವರಗಳನ್ನು ಸಿದ್ಧಪಡಿಸಿ, ಅಧ್ಯಯನ ಪ್ರವಾಸದ ಉಪಯುಕ್ತತೆ ಹಾಗೂ ತತ್ಸಂಬಂಧದ ಸೂಕ್ತ ಸಮರ್ಥನೆಯನ್ನು ಸಿದ್ಧಪಡಿಸಲು ನಿರ್ದೇಶಿಸಿ, ಪ್ರಸ್ತಾವನೆಯನ್ನು ಕುಲಸಚಿವರು ಸರಕಾರಕ್ಕೆ ಸಮರ್ಥನೆಯೊಂದಿಗೆ ಮರುಸಲ್ಲಿಸಲು ಮಂಡಳಿಯು ಸರ್ವಾನುಮತದಿಂದ ತೀರ್ಮಾನಿಸಿತು.

ಮಾನ್ಯ ಸದಸ್ಯರಾದ ಡಾ॥ ಎಂ. ಶೇಖರಗೌಡ ಇವರು ಇಸ್ರೇಲ್ ಪ್ರವಾಸದ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸರಕಾರದ ಕಾರ್ಯದರ್ಶಿಗಳು (ಕೃಷಿ ಇಲಾಖೆ) ಇವರು ಈ ಬಗ್ಗೆ ಸರಕಾರದ ಮಟ್ಟದಲ್ಲಿ ಚಿಂತನೆ ನಡೆಯುತ್ತಿದ್ದು, ಶೀಘ್ರವೇ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಿಗೆ ಪ್ರಸ್ತಾವನೆ ಸಲ್ಲಿಸಲು ತಿಳಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.

**(ಕ್ರಮ : ಕುಲಸಚಿವರು / ಸಂಶೋಧನಾ ನಿರ್ದೇಶಕರು / ವಿಸ್ತರಣಾ ನಿರ್ದೇಶಕರು)**

2. **ಸಹಾಯಕ ಪ್ರಾಧ್ಯಾಪಕರು (ಅನುವಂಶೀಯತೆ ಮತ್ತು ಸಸ್ಯ ತಳಿ ಅಭಿವೃದ್ಧಿ) ಹುದ್ದೆಯ ನೇಮಕಾತಿಯಲ್ಲಿ ಅತ್ಯುನ್ನತ ಮೆರಿಟ್ ಹೊಂದಿದ ಪರಿಶಿಷ್ಟ ಪಂಗಡದ ಅಭ್ಯರ್ಥಿಯಾದ ಡಾ॥ ವಿ. ಹನುಮಂತ ನಾಯ್ಕ್ ಇವರನ್ನು ಕಡೆಗಣಿಸಿರುವ ಕುರಿತು.**

**ಠರಾವು :**

ಅಧ್ಯಕ್ಷರು ವಿಷಯದ ಕುರಿತು ತಮಗೆ ಮಾನ್ಯ ಸದಸ್ಯರಾದ ಡಾ॥ ಎಂ. ಶೇಖರಗೌಡ ಹಾಗೂ ಹೈದ್ರಾಬಾದ್–ಕರ್ನಾಟಕ ಪ್ರದೇಶ ವಾಲ್ಮೀಕಿ ನಾಯಕ ಸಂಘದ ಪದಾಧಿಕಾರಿಗಳಿಂದ ಸಲ್ಲಿತವಾದ ಮನವಿ ಪತ್ರಗಳನ್ನು ಸಭೆಯಲ್ಲಿ ಮಂಡಿಸಿದಾಗ, ಸರಕಾರದ ಕಾರ್ಯದರ್ಶಿಗಳು (ಕೃಷಿ ಇಲಾಖೆ) ಇವರು ವಿಷಯದ

| | |
|---|---|
| | ಬಗ್ಗೆ ತಾವು ಸೂಕ್ತ ಹೆಚ್ಚುವರಿ ಮಾಹಿತಿಯನ್ನು ಪಡೆಯಲು ಬಯಸಿದ್ದು, ವಿಷಯವನ್ನು ಮುಂದೂಡುವಂತೆ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಂಡಳಿಯು ವಿಷಯದ ಬಗ್ಗೆ ಚರ್ಚೆಯನ್ನು ಮುಂದಿನ ಸಭೆಗೆ ಮುಂದೂಡಲು ಠರಾಯಿಸಿತು.<br>(ಕ್ರಮ : ಕುಲಸಚಿವರು) |

ಬೇರಾವುದೇ ವಿಷಯಗಳ ಬಗ್ಗೆ ಅಧ್ಯಕ್ಷರು ಚರ್ಚಿಸಲು ಅನುಮತಿಸದ ಕಾರಣ, ಸಭಾಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ/– 13–10–2018 | ಸಹಿ/– 13–10–2018 |
|---|---|
| (ಎಸ್.ಕೆ. ಮೇಟಿ)<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | (ಗುತ್ತಿ ಜಂಬುನಾಥ)<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

(ಗುತ್ತಿ ಜಂಬುನಾಥ)
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

37